ಕ್ರಮಸಂಖ್ಯೆ - 149
ನಿಯಮ - 72

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡ ಅವರ ನಿಯಮ 72ರಡಿಯಲ್ಲಿನ ಸೂಚನೆಗೆ ಮಾನ್ಯ ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರ ಉತ್ತರ.**

**ವಿಷಯ:** ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ನಗರದ ಕೆಂಗೇರಿ 2ನೇ ಹಂತದಲ್ಲಿರುವ ಇ.ಡಬ್ಲ್ಯೂ.ಎಸ್. ಮನೆ ನಂ. 401 ನ್ನು ಹಂಚಿಕೆ ಮಾಡಲಾಗಿದ್ದು, ಈ ಮನೆಗೆ ಹೊಂದಿಕೊಂಡಂತಿರುವ 5X8 ಅಡಿ ಅಳತೆಯ ಅಂಚುಭೂಮಿಯನ್ನು ಹಂಚಿಕೆದಾರರಿಗೆ ಹಂಚಿಕೆ ಮಾಡಿಕೊಡುವಂತೆ ಕೋರಿ ಹಲವಾರು ಬಾರಿ ಮನವಿ ಸಲ್ಲಿಸಲಾಗಿದ್ದರೂ ಈವರೆಗೆ ಹಂಚಿಕೆ ಮಾಡಿರುವುದಿಲ್ಲ. ಆದರೆ ಮನೆ ಸಂಖ್ಯೆ: 400, 403 ಮತ್ತು 404ರ ಮನೆಗಳಿಗೆ ಹೊಂದಿಕೊಂಡಿರುವ ಅಂಚುಭೂಮಿಯನ್ನು ಸದರಿ ಮನೆಯ ಹಂಚಿಕೆದಾರರಿಗೆ ಹಂಚಿಕೆ ಮಾಡಲಾಗಿದೆ. ಆದ್ದರಿಂದ ಮನೆ ನಂ. 401ರ ಪಕ್ಕದಲ್ಲಿರುವ ಅಂಚುಭೂಮಿಯನ್ನು ಹಂಚಿಕೆದಾರರಿಗೆ ಹಂಚಿಕೆ ಮಾಡುವ ಕುರಿತು.

*****

**ಉತ್ತರ:** ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ನಗರದ ಕೆಂಗೇರಿ 2ನೇ ಹಂತದಲ್ಲಿರುವ ಇ.ಡಬ್ಲ್ಯೂ.ಎಸ್. ಮನೆ ನಂ. 401ರ ಅಳತೆ 25 x 18 ಅಡಿ, ಒಟ್ಟು 450.00 ಚದರಡಿಗಳಿದ್ದು, ಈ ಮನೆಯ ಹಿಂಭಾಗದಲ್ಲಿ 18 x 18 ಅಡಿ, ಒಟ್ಟು 324 ಚದರಡಿ ಜಾಗವಿರುತ್ತದೆ. ಆದರೆ, ಸದರಿ ಜಾಗದ ಉತ್ತರಕ್ಕೆ 9.00 ಮೀಟರ್ ರಸ್ತೆ ಮತ್ತು ಪಶ್ಚಿಮ ಭಾಗಕ್ಕೆ 12 ಮೀಟರ್ 7ನೇ ಮುಖ್ಯರಸ್ತೆ ಇರುತ್ತದೆ. ಇ.ಡಬ್ಲ್ಯೂ.ಎಸ್. ಮನೆ ನಂ. 400ರ ದಕ್ಷಿಣ ಭಾಗಕ್ಕೆ ಹಾಗೂ, 403 ಮತ್ತು 404ರ ಮನೆಗಳ ಹಿಂಭಾಗದಲ್ಲಿರುವ ಜಾಗಕ್ಕೆ ರಸ್ತೆ ಇಲ್ಲದೇ ಇರುವುದರಿಂದ ಸದರಿ ಹಂಚಿಕೆದಾರರ ಮನವಿಯನ್ನು ಪರಿಗಣಿಸಿ ಮಂಡಳಿ ನಿಯಮಾನುಸಾರ ಅಂಚು ಜಾಗವನ್ನು ಹಂಚಿಕೆ ಮಾಡಲಾಗಿರುತ್ತದೆ.

ಕರ್ನಾಟಕ ಗೃಹ ಮಂಡಳಿಯ ಸುತ್ತೋಲೆ ಸಂಖ್ಯೆ: ಕಗೃಮಂ/ಉಪ್ರವ್ಯ(ಗ್ರಾಸೇ)/ಅಂಚುಜಾಗ/ಹಂಚಿಕೆ-5/2017-18, ದಿನಾಂಕ: 27.04.2017 ರಲ್ಲಿ "ಯಾವುದೇ ವರ್ಗ (EWS, LIG, MIG & HIG)ದ ಮನೆ/ನಿವೇಶನಗಳ ಅಕ್ಕಪಕ್ಕ 15 ಅಡಿ ಹಾಗೂ ಮೇಲ್ಪಟ್ಟು (4.5 ಮೀಟರ್) ಅಳತೆಯ ಜಾಗವಿದ್ದರೆ ಇದನ್ನು ಸ್ವತಂತ್ರ ನಿವೇಶನ ಎಂದು ಪರಿಗಣಿಸಬೇಕು" ಎಂದು ನಿರ್ಣಯಿಸಲಾಗಿರುವುದರಿಂದ ಸದರಿ ಜಾಗವನ್ನು ಮೂಲೆ ನಿವೇಶನವೆಂದು ಪರಿಗಣಿಸಿ ಹರಾಜಿನ ಮೂಲಕ ವಿಲೇವಾರಿ ಮಾಡಲಾಗುವುದು.

(ವಇ 125 ಕಗೃಮಂ 2021)

(ವಿ.ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು.